# ನಾಲ್ವರು ಮಹಾಶಿಷ್ಯರು

❑ ಸ್ವಾಮಿ ರಾಘವೇಶಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ಶ್ರೀಸುರೇಶ್ವರಾಚಾರ್ಯರು

ಶಂಕರಾಚಾರ್ಯರ ಎರಡನೆಯ ಪ್ರಧಾನ ಶಿಷ್ಯರೆಂದರೆ ಸುರೇಶ್ವರಾಚಾರ್ಯರು. ಪ್ರಯಾಗದಲ್ಲಿ ವೈದಿಕ ಕರ್ಮಕಾಂಡವನ್ನು ಉದ್ಧರಿಸಿದ ಮಹಾಪಂಡಿತರು ಎನಿಸಿಕೊಂಡಿದ್ದ ಕುಮಾರಿಲ ಭಟ್ಟರೆಂಬುವವರಿದ್ದರು. ಕೇವಲ ಕರ್ಮಮಾರ್ಗವೇ ಮೋಕ್ಷಕ್ಕೆ ಮೂಲ ಸಾಧನವೆಂದು ವಾದಿಸುವ ಮತ್ತು ಸಾಧಿಸುವ ವಿದ್ವಾಂಸರು ಅವರಾಗಿದ್ದರು. ಆಚಾರ್ಯ ಶಂಕರರು ಅವರನ್ನು ಭೇಟಿ ಮಾಡಿ ಅವರಿಗೆ ಮಾರ್ಗದರ್ಶನ ಮಾಡಬೇಕೆಂದು ಪ್ರಯಾಗಕ್ಕೆ ಬಂದರು. ಆದರೆ ಆ ಸಮಯದಲ್ಲಿ ಅವರು ಕಾರಣಾಂತರಗಳಿಂದ ತಮ್ಮ ದೇಹವನ್ನು ಅಗ್ನಿಯಲ್ಲಿ ದಹಿಸಿ ದೇಹತ್ಯಾಗ ಮಾಡಲು ಸಿದ್ಧರಾಗಿದ್ದರು. ಶ್ರೀಶಂಕರರು ಎಷ್ಟೇ ಪ್ರಯತ್ನಿಸಿದರೂ, ಅವರನ್ನು ಆ ನಿರ್ಧಾರದಿಂದ ತಡೆಯಲಾಗಲಿಲ್ಲ. ಅವರು, "ನರ್ಮದಾ ನದೀ ತೀರದ ಮಾಹಿಷ್ಮತೀ ನಗರದಲ್ಲಿ ಮಂಡನಮಿಶ್ರನೆಂಬ ನನ್ನ ಆತ್ಮೀಯ ಶಿಷ್ಯನಿದ್ದಾನೆ. ತಾವು ಅವನೊಡನೆ ವಾದ ಮಾಡಿ ಅವನನ್ನು ಸೋಲಿಸಿ ತಮ್ಮ ಮತವನ್ನು ಸ್ಥಾಪಿಸಿ" ಎಂದರು.

ಮಾಹಿಷ್ಮತೀ ನಗರ ಇಂದಿನ ಮಧ್ಯಪ್ರದೇಶದ ಇಂದೋರ್ ಜಿಲ್ಲೆಯಲ್ಲಿ ಮಾಂಧಾತಾ ಎಂಬ ಊರು. ಅಲ್ಲಿ ವಿಶ್ವರೂಪ ಎಂಬ ಬ್ರಾಹ್ಮಣೋತ್ತಮನಿದ್ದನು. ಇವರ ಇನ್ನೊಂದು ಹೆಸರು ಮಂಡನ ಮಿಶ್ರರು. ಆಚಾರ್ಯರು ತಮ್ಮ ಶಿಷ್ಯರೊಡನೆ ಮಾಹಿಷ್ಮತೀ ನಗರ ತಲುಪಿದರು. ಶಿಷ್ಯರನ್ನು ಒಂದೆಡೆ ನಿಲ್ಲಲು ತಿಳಿಸಿ, ಮಂಡನ ಮಿಶ್ರರನ್ನು ಭೇಟಿಯಾಗಲು ಅವರ ಮನೆಯನ್ನು ಹುಡುಕುತ್ತಾ ಹೊರಟರು. ರಸ್ತೆಯಲ್ಲಿ ಕೆಲವರು ಹೆಂಗಸರು ತಲೆಯಮೇಲೆ ನೀರಿನಿಂದ ತುಂಬಿದ ಕೊಡವನ್ನು ಹೊತ್ತು ಎದುರಿಗೆ ಬರುತ್ತಿದ್ದರು. ಶಂಕರರು ಅವರನ್ನು ಮಂಡನ ಮಿಶ್ರರ ಮನೆಗೆ ದಾರಿ ಕೇಳಿದರು. ಆ ಹೆಂಗಸರಿಗೆ ಆಶ್ಚರ್ಯವಾಯಿತು. ಕಾರಣ ಅವರ ಮನೆಯ ಪರಿಚಯವಿಲ್ಲದವರು ಆ ಊರಿನಲ್ಲಿ ಯಾರೂ ಇರಲಿಲ್ಲ. ಇವರು ಬೇರೆ ಊರಿನವರಿರಬೇಕೆಂದು ಯೋಚಿಸಿ ಹೇಳಿದರು : "ಮಾನ್ಯರೇ, ಅವರ ಮನೆಯ ಗುರುತು ಹಿಡಿಯುವುದು ಬಹಳ ಸುಲಭ. ಅವರ ಮನೆಯ ಮುಂದೆ ಕಟ್ಟಿರುವ ಪಂಜರಗಳಲ್ಲಿರುವ ಗಿಳಿಗಳು— 'ಜಗತ್ತು ಸತ್ಯವೇ? ಅಥವಾ ಮಿಥ್ಯವೇ? ಶ್ರುತಿಗಳು ಸ್ವತಃ ಪ್ರಮಾಣಗಳೇ? ಮೋಕ್ಷಕ್ಕೆ ಮಾರ್ಗ ಕರ್ಮವೇ, ಜ್ಞಾನವೇ?' ಎಂಬಂತಹ ಗಹನ ವಿಚಾರಗಳನ್ನು ಚರ್ಚಿಸುತ್ತಿರುತ್ತವೆ. ಅದೇ ಅವರ ಮನೆ."

ಶಂಕರಾಚಾರ್ಯರು ಸುಲಭವಾಗಿ ಅವರ ಮನೆಯನ್ನು ಕಂಡುಹಿಡಿದರು. ಅಂದು ಮಂಡನ ಮಿಶ್ರರ ತಂದೆಯವರ ವಾರ್ಷಿಕ ಶ್ರಾದ್ಧ. ಮಂಡನರು ಒಳ ಬಾಗಿಲನ್ನು ಭದ್ರಪಡಿಸಿ ಪಿತೃಕಾರ್ಯದಲ್ಲಿ ಮಗ್ನರಾಗಿದ್ದರು. ಮಂಡನರನ್ನು ಭೇಟಿಮಾಡುವ ಅವಸರದಲ್ಲಿದ್ದ ಶಂಕರರು ತಮ್ಮ ಯೋಗಶಕ್ತಿಯನ್ನು ಉಪಯೋಗಿಸಿ, ವಾಯುಮಾರ್ಗದಿಂದ ಮಂಡನರ ಮನೆಯೊಳಗೆ ಪ್ರವೇಶಿಸಿ ಮಂಡನರ ಮುಂದೆ ನಿಂತರು. ಕರ್ಮನಿಷ್ಠರಾದ ಮಂಡನರಿಗೆ ಒಬ್ಬ ಸಂನ್ಯಾಸಿಯನ್ನು, ಅದೂ ಶ್ರಾದ್ಧ ನಡೆಯುವ ಸಮಯದಲ್ಲಿ, ಕಂಡು ಅತಿ ಕೋಪ ಬಂದಿತು. ಅವರನ್ನು ಮೊದಲು ಅಲ್ಲಿಂದ ಹೊರ ಹಾಕಬೇಕೆಂದು ಯತ್ನಿಸಿದರು. ಅವಾಚ್ಯ ಶಬ್ದಗಳನ್ನು ಬಳಸಿದರೂ ಶಂಕರರು ಸ್ವಲ್ಪವೂ ಸಹನೆ ಕಳೆದುಕೊಳ್ಳಲಿಲ್ಲ. ಇಬ್ಬರಿಗೂ ವಾಗ್ವಾದ ಶುರುವಾಯಿತು. ಕೊನೆಗೆ ಶಂಕರರು ಹೇಳಿದರು, "ನೀವು ಶಾಸ್ತ್ರಾರ್ಥವನ್ನು ಮಾತ್ರ ತಿಳಿದವರು, ಅಷ್ಟೇ. ಅದರ ಅನುಷ್ಠಾನ ಗೊತ್ತಿಲ್ಲ. ಅತಿಥಿಸೇವೆ ಗೃಹಸ್ಥನ ಪರಮ ಧರ್ಮ, ಕರ್ತವ್ಯವೂ ಹೌದು. ಅಲ್ಲದೆ ಪಿತೃಕಾರ್ಯ ಮಾಡುತ್ತಿರುವಾಗ ಕೋಪವನ್ನಾಗಲೀ, ಅಶ್ರದ್ಧೆಯನ್ನಾಗಲೀ ತೋರಿಸಬಾರದು. ಅದು ಶಾಸ್ತ್ರ ವಿಧಿ." ಬಂದಿರುವ ಸಂನ್ಯಾಸಿ ಶಂಕರಾಚಾರ್ಯರು ಎಂದು ತಿಳಿದ ಮಂಡನರು ಶಂಕರರಿಂದ ಕ್ಷಮೆಯಾಚಿಸಿದರು. ಬಂದಿರುವುದು ವಾದಭಿಕ್ಷೆಗೆ ಎಂದು ತಿಳಿದು, ಅದಕ್ಕೆ ಒಂದು ದಿನವನ್ನು ಗೊತ್ತುಪಡಿಸಲಾಯಿತು.

ಅದು ಪರಸ್ಪರ ವಿರುದ್ಧವಾದ ಮತಗಳನ್ನು ಪ್ರತಿಪಾದಿಸುವ ಸಭೆಯಾಗಿತ್ತು. ಇಬ್ಬರೂ ದಿಗ್ಗಜರು. ಒಬ್ಬರದು ಪ್ರವೃತ್ತಿಮಾರ್ಗ, ಮತ್ತೊಬ್ಬರದು ನಿವೃತ್ತಿಮಾರ್ಗ. ಒಂದು ಕರ್ಮಕಾಂಡ, ಮತ್ತೊಂದು ಜ್ಞಾನಕಾಂಡ. ಒಂದು ಧರ್ಮಜಿಜ್ಞಾಸೆಯಾದರೆ, ಮತ್ತೊಂದು ಬ್ರಹ್ಮಜಿಜ್ಞಾಸೆ. ಇದಕ್ಕೆ ಎರಡೂ ಮಾರ್ಗಗಳನ್ನು ಚೆನ್ನಾಗಿ ತಿಳಿದಿದ್ದ ಒಬ್ಬ ನ್ಯಾಯಾಧೀಶರ ಆವಶ್ಯಕತೆ ಉಂಟಾಯಿತು. ಆ ಮಧ್ಯಸ್ಥ ಸ್ಥಾನವನ್ನು ವಹಿಸಲು, ಮಂಡನರ ಪತ್ನಿ ಉಭಯಭಾರತಿಯೇ ಸರಿಯಾದವರೆಂದು, ಅಲ್ಲಿ ನೆರೆದಿದ್ದ ಪಂಡಿತರೆಲ್ಲಾ ಸೂಚಿಸಿದರು. ವಿವಾದದ ಷರತ್ತೆಂದರೆ, ಶಂಕರರು ಸೋತರೆ ಸಂನ್ಯಾಸ ತ್ಯಜಿಸಿ, ಕರ್ಮನಿಷ್ಠರಾಗಿ ಮಂಡನರ ಶಿಷ್ಯರಾಗಬೇಕು. ಮಂಡನರು ಸೋತರೆ, ಸಂನ್ಯಾಸ ಸ್ವೀಕರಿಸಿ ಶಂಕರರ ಶಿಷ್ಯರಾಗಬೇಕು. ಈ ಸಭೆಗೆ ಕುತೂಹಲದಿಂದ ವಿದ್ವಾಂಸರು, ಸಾಮಾನ್ಯರು, ಮಹಿಳೆಯರೂ ಎಲ್ಲರೂ ಸೇರಿದರು. ಮಹಿಳೆಗೆ ಕೊಟ್ಟ ಅತ್ಯಂತ ಉನ್ನತ ಸ್ಥಾನವನ್ನು ಗಮನಿಸಿದಾಗ, ಆ ಕಾಲದಲ್ಲಿ ಸ್ತ್ರೀಯರ ವಿದ್ಯಾಭ್ಯಾಸ ಎಷ್ಟು ಶ್ರೇಷ್ಠಮಟ್ಟದ್ದಾಗಿದ್ದಿತು ಎಂಬುದು ಅರ್ಥವಾಗುತ್ತದೆ.

ವಾಕ್ಯಾರ್ಥದ ಪ್ರಾರಂಭದ ದಿನ ಶಂಕರರು ಶಿಷ್ಯರೊಡನೆ



ಶಂಕರಾಚಾರ್ಯರು ಮತ್ತು ಮಂಡನಮಿಶ್ರರ ನಡುವಿನ ಶಾಸ್ತ್ರಾರ್ಥ

ಮಂಡನರ ಮನೆಗೆ ಬಂದರು. ಆಗಲೇ ಜನ ಕಿಕ್ಕಿರಿದು ತುಂಬಿದ್ದರು. ಮಂಡನರು ಅವರನ್ನು ಗೌರವದಿಂದ ಬರಮಾಡಿಕೊಂಡು ಆಸನವನ್ನು ಅಲಂಕರಿಸುವಂತೆ ಬಿನ್ನವಿಸಿ ಒಳ ಮನೆಗೆ ಹೋದರು. ಸ್ವಲ್ಪ ಸಮಯದ ನಂತರ ಮಂಡನಮಿಶ್ರರು ಸಭಾಪ್ರವೇಶ ಮಾಡಿದರು. ಅವರ ಹಿಂಭಾಗದಲ್ಲಿ, ನ್ಯಾಯಮೂರ್ತಿ ಉಭಯಭಾರತಿಯವರೂ ಮೆಲ್ಲಮೆಲ್ಲಗೆ ಇಬ್ಬರು ದಾಸಿಯರ ಸಮೇತ ನಡೆದು ಬಂದರು. ಮಂಡನರು ತಮ್ಮ ಆಸನದಲ್ಲಿ ಕುಳಿತರು. ಮಂಟಪವೆಲ್ಲ ನೀರವ, ಗಾಢಮೌನ. ಅನಂತರ ಉಭಯಭಾರತಿಯವರು ಮಧ್ಯಸ್ಥರ ಪೀಠವನ್ನು ಅಲಂಕರಿಸಿದರು.

ಘಂಟಾನಾದವಾಯಿತು. ದೇವತಾಪ್ರಾರ್ಥನೆ, ಗುರುವಂದನೆ, ಶಾಂತಿಮಂತ್ರಗಳ ಪಠನ ಮುಗಿಯಿತು. ವಾದಕ್ಕೆ ಮುಂಚೆ ಇಬ್ಬರೂ ಪ್ರತಿಜ್ಞೆ ಮಾಡಬೇಕು. ಶಂಕರರು ಹೀಗೆ ಪ್ರತಿಜ್ಞೆ ಮಾಡಿದರು : "ಈ ಜಗತ್ತಿನಲ್ಲಿ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವೊಂದೆ ಸತ್ಯ. ಬ್ರಹ್ಮಸಾಕ್ಷಾತ್ಕಾರವೆ ಮುಕ್ತಿ, ಜ್ಞಾನವೇ ಮಾರ್ಗ. ಇದೇ ನಮ್ಮ ಸಿದ್ಧಾಂತ. ಈ ಶಾಸ್ತ್ರಾರ್ಥವನ್ನು ನಾವು ಸ್ಥಿರಪಡಿಸದಿದ್ದರೆ, ಕಾಷಾಯ ತ್ಯಜಿಸಿ, ಗೃಹಸ್ಥರಾಗಿ ಮಂಡನಮಿಶ್ರರ ಶಿಷ್ಯರಾಗುತ್ತೇವೆ. ಈ ಜಯಾಪಜಯದಲ್ಲಿ ಉಭಯಭಾರತಿಯವರ ನಿರ್ಣಯ ನಮಗೆ ಸಮ್ಮತ."

ಈಗ ಮಂಡನರ ಸರದಿ. ಅವರು : "ಬ್ರಹ್ಮದ ವಿಷಯದಲ್ಲಿ ವೇದಾಂತ ಪ್ರಮಾಣವಲ್ಲ. ವೇದಗಳ ಪೂರ್ವಭಾಗವಾದ ಕರ್ಮಕಾಂಡವೇ ಪ್ರಧಾನ ಹಾಗೂ ಪ್ರಮಾಣಭೂತ. ಮುಕ್ತಿಗೆ ಕರ್ಮವೇ ಮಾರ್ಗ. ಇದೇ ನಮ್ಮ ಸಿದ್ಧಾಂತ. ಪೂರ್ವ ಮೀಮಾಂಸವೇ ಇದಕ್ಕೆ ಪ್ರಮಾಣ. ಇದನ್ನು ಪ್ರತಿಪಾದಿಸಲು ನಾವು ಅಸಮರ್ಥರಾದರೆ, ನಾವು ಗೃಹಸ್ಥಾಶ್ರಮವನ್ನು ತ್ಯಜಿಸಿ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಶಂಕರರ ಶಿಷ್ಯರಾಗುತ್ತೇವೆ."

ಇವರಿಬ್ಬರ ಪ್ರತಿಜ್ಞೆಯನ್ನು ಕೇಳಿದ ಉಭಯಭಾರತಿಯವರು ಹೇಳಿದರು: "ಈ ವಾದಕ್ಕೆ ಕುಳಿತಿರುವವರಲ್ಲಿಯೂ, ಇಲ್ಲಿ ನೆರೆದಿರುವ ವಿದ್ವತ್ಸಮೂಹಕ್ಕೂ ನನ್ನ ಕೃತಜ್ಞತೆಗಳು. ಈ ಅಪೂರ್ವ ವಾದದಲ್ಲಿ ನನ್ನನ್ನು ಮಧ್ಯಸ್ಥಳನ್ನಾಗಿ ಮಾಡಿ ನಾನಷ್ಟೇ ಅಲ್ಲ, ಇಡೀ ನಾರೀಕುಲವೇ ಹೆಮ್ಮೆಪಡುವಂತಹ ಗೌರವಾನ್ವಿತ ಸ್ಥಾನವನ್ನು ಕೊಟ್ಟಿರುವಿರಿ. ಈ ಶಾಸ್ತ್ರಾರ್ಥದಲ್ಲಿ ನಾನು ಮಧ್ಯಸ್ಥಳಾದರೂ, ಈ ಗೃಹದ ಗೃಹಿಣಿಯೂ ಆಗಿದ್ದೇನೆ. ಇಲ್ಲಿ ನೆರೆದಿರುವ ಎಲ್ಲರ ಉಪಚಾರದ ಕರ್ತವ್ಯವೂ ನನ್ನ ಮೇಲಿದೆ. ನಾನು ಮಂತ್ರಪೂರಿತವಾದ ಎರಡು ಹೂಮಾಲೆಗಳನ್ನು ತಂದಿದ್ದೇನೆ. ಇವುಗಳಲ್ಲಿ ಒಂದೊಂದನ್ನು ವಾದಿ, ಪ್ರತಿವಾದಿಗಳು ಧರಿಸಬೇಕು. ಇವು ತಾವಾಗಿ ಬಾಡುವುದಿಲ್ಲ. ಈ ವಾದ ಮುಗಿಯುವವರೆಗೂ ಇವು ಅವರ ಕೊರಳುಗಳಲ್ಲಿ ಇರಬೇಕು. ಎಂದು ಯಾರ ಕೊರಳಿನ ಪುಷ್ಪಮಾಲೆಯು ಬಾಡಿಹೋಗುವುದೊ ಆಗ ಅವರು ಈ ವಾದದಲ್ಲಿ ಸೋತರೆಂದು ಭಾವಿಸಬೇಕು." ಹೀಗೆ ಹೇಳಿ ಉಭಯಭಾರತೀಯವರೇ ಒಂದು ಹೂಮಾಲೆಯನ್ನು ಮಂಡನಮಿಶ್ರರ ಕೊರಳಿಗೆ ಹಾಕಿದರು. ಇನ್ನೊಂದನ್ನು ಪದ್ಮಪಾದರಿಂದ ಶಂಕರರ ಕೊರಳಿಗೆ ಹಾಕಿಸಿದರು.

ವಾದ ಆರಂಭವಾಯಿತು. ಮೊದಲು ಸ್ಥಾನ, ಮಾನ, ಅರ್ಹತೆಯ ಪ್ರಶ್ನೆ ಎದ್ದಿತು. ಮಂಡನರು ಕೇಳಿದರು : "ಕಲಿಯುಗದಲ್ಲಿ ಸಂನ್ಯಾಸ ವರ್ಜ್ಯವೆಂದು ಪರಿಗಣಿಸಲ್ಪಟ್ಟಿದೆ. ನೀವು ಬ್ರಹ್ಮಚಾರಿಗಳಾಗಿರುವಾಗಲೇ ಸಂನ್ಯಾಸವನ್ನು ಸ್ವೀಕರಿಸಿದ್ದೀರಿ. ಶ್ರುತಿಸ್ಮೃತಿಗಳಲ್ಲಿ ವಿಧಿಸಿರುವ ಕರ್ಮತ್ಯಾಗ ಮಾಡಿದ್ದೀರಿ. ಯಜ್ಞ, ದಾನ, ತಪಸ್ಸು ಇವು ಬ್ರಾಹ್ಮಣರ ಕರ್ತವ್ಯ. ಯಜ್ಞೋಪವೀತವು ಮುಕ್ತಿ ಸಾಧನ. ಆದರೆ ನೀವು ಶಿಖಾ, ಯಜ್ಞೋಪವೀತವನ್ನೇ ತೆಗೆದಿದ್ದೀರಿ. ಆದ್ದರಿಂದ ವಾದಕ್ಕೆ ಕೂರಲೂ ನೀವು ಅನರ್ಹರು."

**ಶಂಕರರು** : "ನೀವು ಹೇಳುವುದು ಸರಿಯಲ್ಲ. ಶ್ರುತಿ-ಸ್ಮೃತಿಗಳಲ್ಲಿ ಮೂರು ಆಶ್ರಮದವರಿಗೂ ಸಂನ್ಯಾಸವು ವಿಧಿಸಲ್ಪಟ್ಟಿದೆ. ಮತ್ತೆ ಯಜ್ಞೋಪವೀತದ ವಿಚಾರ—ಬ್ರಾಹ್ಮಣ್ಯಕ್ಕೆ ಯಜ್ಞೋಪವೀತ ಒಂದೇ ಸಾಧನವಲ್ಲ. ಕರ್ಮಾಚರಣೆಗೆ ಯಜ್ಞೋಪವೀತ ಬೇಕೇ ಹೊರತು, ಕರ್ಮತ್ಯಾಗವಾದ ಮೇಲೆ ಅದರ ಆವಶ್ಯಕತೆಯಿಲ್ಲ. ಸಂನ್ಯಾಸ ಎರಡು ವಿಧವಾದದ್ದು: ಪ್ರಕಾರ ಸಂನ್ಯಾಸ ಮತ್ತು ವಿದ್ವತ್ ಸಂನ್ಯಾಸ. ಪ್ರಕಾರ ಸಂನ್ಯಾಸ ಆಶ್ರಮರೂಪವಾದದ್ದು, ಬ್ರಹ್ಮಲೋಕವೇ ಮುಂತಾದ ಫಲಗಳನ್ನು ಪಡೆಯಲು ಸಾಧನವಾಗಿರುವುದು. ಆದರೆ ವಿದ್ವತ್ ಸಂನ್ಯಾಸವು ಆತ್ಮಜ್ಞಾನಾರ್ಥವಾದದ್ದು. ಈ ಸಂನ್ಯಾಸಕ್ಕೆ ಯಾವ ಬಾಹ್ಯ ಚಿಹ್ನೆಗಳ ಆವಶ್ಯಕತೆಯೂ ಇಲ್ಲ."

**ಮಂಡನರು** : "ಹಾಗಾದರೆ ಈ ಕಾಷಾಯ ವಸ್ತ್ರ, ಈ ದಂಡ, ಈ ಕಮಂಡಲುಗಳಾದರೂ ಏಕೆ ಇರಬೇಕು?"

**ಶಂಕರರು** : "ನಿಜ, ಇವುಗಳ ಆವಶ್ಯಕತೆ ಇಲ್ಲ. ಆದರೆ ಈಗ

ನಾಸ್ತಿಕ ಮತದ ಸಂನ್ಯಾಸಿಗಳೂ ಸಾಕಷ್ಟು ಇದ್ದಾರೆ. ನಾವು ಯಾವ ಚಿಹ್ನೆಯನ್ನೂ ಧರಿಸದಿದ್ದರೆ ನಾವು ನಾಸ್ತಿಕ ಮತದವರೇ, ಆಸ್ತಿಕ ಮತದವರೇ ಎಂಬುದು ತಿಳಿಯದೆ ಗೊಂದಲ ಉಂಟಾಗುತ್ತದೆ."

ಮಂಡನರು : "ಇದನ್ನೆಲ್ಲಾ ಧರಿಸಿದ ಮೇಲೆ ಯಜ್ಞೋಪವೀತವನ್ನು ಏಕೆ ತ್ಯಜಿಸಬೇಕು?"

ಶಂಕರರು : "ಅದು ಕರ್ಮಾಂಗವಾಗಿದೆ. ಅಲ್ಲದೆ ಅದೊಂದೇ ಬ್ರಾಹ್ಮಣ್ಯದ ಲಕ್ಷಣವಲ್ಲ. ನಾನು ಬ್ರಹ್ಮಜ್ಞಾನಿ. ನನಗೆ ಜ್ಞಾನವೇ ಉಪವೀತ."

ಹೀಗೆ ವಾದ ವಿವಾದ ನಡೆಯುತ್ತಿದ್ದಾಗ ಮಧ್ಯಾಹ್ನವಾಯಿತು. ಉಭಯಭಾರತಿ ಸಭೆ ಪ್ರವೇಶಿಸಿ ಇಬ್ಬರ ಮಾಲೆಗಳತ್ತ ಕಣ್ಣು ಹಾಯಿಸಿ, ಶಾಸ್ತ್ರಸಂಪ್ರದಾಯದಂತೆ ಪತಿಯನ್ನು ಭೋಜನಕ್ಕೂ, ಶಂಕರರನ್ನು ಭಿಕ್ಷೆಗೂ ದಯಮಾಡಿಸುವಂತೆ ಆಹ್ವಾನಿಸಿದರು. ಊಟ, ವಿಶ್ರಾಂತಿಗಳ ನಂತರ ಮತ್ತೆ ಸಭೆ ಸೇರಿತು. ಮಂಡನರು ಮತ್ತೆ ಪ್ರಶ್ನಿಸಿದರು.

ಮಂಡನರು : ಕರ್ಮವೇ ಮೋಕ್ಷಕ್ಕೆ ಸಾಕ್ಷಾತ್ ಕಾರಣ ಎಂದಿರಲು ಕರ್ಮತ್ಯಾಗವು ಹೇಗೆ ಸರಿಯಾದೀತು?

ಶಂಕರರು : ಮೋಕ್ಷಕ್ಕೆ ಮಾರ್ಗ ಜ್ಞಾನ, ಕರ್ಮವಲ್ಲ. ಕರ್ಮವು ಚಿತ್ತಶುದ್ಧಿಗೆ ಮಾತ್ರ.

ಮಂಡನರು : ಬ್ರಹ್ಮವು ಕಣ್ಣಿಗೆ ಕಾಣದ ವಸ್ತು. ಕಣ್ಣಿಗೆ ಕಾಣುವ ಈ ಪ್ರಪಂಚವನ್ನು ಮಿಥ್ಯೆ ಎನ್ನುತ್ತೀರಿ. ಕಾಣದ ಆ ಬ್ರಹ್ಮನನ್ನು ಸತ್ಯ ಎನ್ನುತ್ತೀರಿ.

ಶಂಕರರು : ಬ್ರಹ್ಮಕ್ಕೆ ಪ್ರತ್ಯಕ್ಷ ಪ್ರಮಾಣ ಅನಾವಶ್ಯಕ. ಜಡ ಕಣ್ಣಿನಿಂದ ಅದನ್ನು ನೋಡಲಾಗುವುದಿಲ್ಲ. ಈಗ ಗಾಳಿ, ಶಬ್ದ ಕಣ್ಣಿಗೆ ಕಾಣುವುದಿಲ್ಲ. ಅದಕ್ಕೆ ಅದು ಸುಳ್ಳೇ? ಪ್ರಪಂಚವು ಸತ್ಯವಲ್ಲ ಎನ್ನುವುದಕ್ಕೆ ಶ್ರುತಿಯೇ ಆಧಾರ.

ಮಂಡನರು : ಪರಬ್ರಹ್ಮನು ಸತ್ಯವೆಂಬುದನ್ನು ಹೇಗೆ ಸಿದ್ಧಾಂತ ಮಾಡುವಿರಿ?

ಶಂಕರರು : ಊಹೆಗೆ ಅತೀತವಾದ ಪ್ರಪಂಚದ ಸೃಷ್ಟಿವೈಚಿತ್ರ್ಯವನ್ನು ನೋಡಿದರೆ ಇದಕ್ಕೆ ಕಾರಣಭೂತನು ಒಬ್ಬನು ಇರಲೇಬೇಕೆಂದು ಸಿದ್ಧಾಂತವಾಗುವುದಿಲ್ಲವೇ?

ಮಂಡನರು : ಇದರಲ್ಲಿ ಆಶ್ಚರ್ಯವೇನಿದೆ? ಬೀಜ ಬಿತ್ತಿದರೆ ಪೈರು ಬರುತ್ತದೆ. ಹಾಗೆಯೇ ಸ್ತ್ರೀಯರ ಗರ್ಭದಲ್ಲಿ ಮಕ್ಕಳು ಜನಿಸುತ್ತಾರೆ. ಇದು ಸ್ವಭಾವ ತಾನೇ?

ಶಂಕರರು : ಬೀಜ ಬೆಳೆಯುವುದಕ್ಕೂ, ಮಕ್ಕಳಾಗುವುದಕ್ಕೂ ಕಾರಣನೊಬ್ಬನಿರಬೇಕಷ್ಟೆ? ಹಾಗೆಯೇ ಈ ಸೃಷ್ಟಿಗೂ ಕಾರಣನಾದವನನ್ನು ಬ್ರಹ್ಮನೆನ್ನುತ್ತೇವೆ. ಅವನೇ ಕೂಟಸ್ಥ, ಪರಬ್ರಹ್ಮ, ಸರ್ವಾಂತರ್ಯಾಮಿ, ನಾಮರೂಪ ವಿವರ್ಜಿತ, ಸಚ್ಚಿದಾನಂದ ಸ್ವರೂಪ.

ಹೀಗೆ ಜೀವ-ಆತ್ಮ, ವಿದ್ಯೆ-ಅವಿದ್ಯೆ, ಪರಬ್ರಹ್ಮ-ಮಾಯೆ, ಜ್ಞಾನ-ಕರ್ಮ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಮೋಕ್ಷಶಾಸ್ತ್ರ ಮೊದಲಾದ ಗಹನ ವಿಷಯಗಳ ಮೇಲೆ ವಾದ ವಿವಾದ ನಡೆಯಿತು. ಹದಿನಾರು ದಿನಗಳು ರಸವತ್ತಾಗಿ ಸಭೆ ನಡೆಯಿತು. ಕೊನೆಯ ದಿವಸ ಶಂಕರರು 'ತತ್ತ್ವಮಸಿ' ವಾಕ್ಯದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಪ್ರಶ್ನೆಗಳ ಸುರಿಮಳೆಗಳನ್ನೇ ಸುರಿಸಿದರು. ಅವುಗಳಿಗೆ ಸಮರ್ಪಕವಾಗಿ ಉತ್ತರಿಸಲಾರದೆ ಮಂಡನರು ಬೆವರಲಾರಂಭಿಸಿದರು. ಶಂಕರರ ತರ್ಕಬದ್ಧವಾದ ವಾದಗಳನ್ನು ಖಂಡಿಸಲಾಗಲಿಲ್ಲ. ಮುಖ ಮ್ಲಾನವಾಯಿತು. ಪರಾಭವದ ನಿರೀಕ್ಷೆಯಿಂದ ಎದೆ ಕುದಿಯಲಾರಂಭಿಸಿತು. ಶರೀರ ಬಿಸಿಯಾಯಿತು. ಪುಷ್ಪಮಾಲೆ ಇದೆಲ್ಲದರ ಪರಿಣಾಮವಾಗಿ ಬಾಡಲಾರಂಭಿಸಿತು. ಸಭೆಯಲ್ಲಿ ನೆರೆದಿದ್ದ ಪಂಡಿತರಿಂದ ಇದನ್ನು ನಂಬಲೇ ಆಗಲಿಲ್ಲ. ಮಂಡನರಿಗೆ ಸೋಲೇ! ಮಧ್ಯಾಹ್ನವಾಯಿತು, ಉಭಯಭಾರತಿ ಎಂದಿನಂತೆ ಊಟಕ್ಕೆ ಕರೆಯಲು ಬಂದರು. ಮಂಡನರ ಬಾಡಿದ ಮಾಲೆಯನ್ನು ನೋಡಿ ಮನಸ್ಸಿನಲ್ಲಿ ಕ್ಷಣಕಾಲ ತುಮುಲವುಂಟಾಯಿತು. ಆದರೆ ನ್ಯಾಯಕ್ಕೆ ಚ್ಯುತಿ ಬಾರದಂತೆ ಅಂದು ಅವರು, ಸಭೆಯಲ್ಲಿ ಎಲ್ಲರಿಗೂ ಕೇಳುವಂತೆ ಜೋರಾಗಿ "ಪೂಜ್ಯಪಾದರಿಬ್ಬರೂ ಭಿಕ್ಷೆಗೆ ದಯಮಾಡಿಸಬೇಕು" ಎಂದು ಬಿನ್ನವಿಸಿದರು. ಮಂಡನರು ಮನಸ್ಸಿನಲ್ಲೇ ಸಂನ್ಯಾಸ ಸ್ವೀಕರಿಸಿ ಶಂಕರರ ಶಿಷ್ಯರಾಗಲು ನಿರ್ಧರಿಸಿದರು. ಉಭಯಭಾರತಿಯ ಕೋರಿಕೆಯಂತೆ ಅರ್ಧಾಂಗಿಯಾದ ಅವರನ್ನೂ ಶಂಕರರು ವಾದದಲ್ಲಿ ಸೋಲಿಸಿದರು.

ಮಂಡನಮಿಶ್ರರು ತಮ್ಮ ಗುರುಕುಲವನ್ನು ಒಬ್ಬ ಹಿರಿಯ ಶಿಷ್ಯನಿಗೆ ವಹಿಸಿ ಶಂಕರರಿದ್ದ ಸ್ಥಳಕ್ಕೆ ಬಂದರು. ಶಿವದೇವಾಲಯದಲ್ಲಿ ಮಂಡನ ಮಿಶ್ರರಿಗೆ ಶಾಸ್ತ್ರೀಯ ರೀತಿಯಲ್ಲಿ ಸಂನ್ಯಾಸ ದೀಕ್ಷೆಯನ್ನು ಪ್ರದಾನ ಮಾಡಿ, ಕಾವಿಯ ವಸ್ತ್ರ, ದಂಡ ಕಮಂಡಲುಗಳನ್ನಿತ್ತು, ಮಹಾವಾಕ್ಯವನ್ನು ಉಪದೇಶಿಸಿ ಸುರೇಶ್ವರಾಚಾರ್ಯರೆಂಬ ಹೊಸ ಹೆಸರಿತ್ತು ತಮ್ಮ ಪ್ರಧಾನ ಶಿಷ್ಯರಲ್ಲಿ ಎರಡನೆಯವರನ್ನಾಗಿ ಸ್ವೀಕರಿಸಿ ಆಶೀರ್ವದಿಸಿದರು. ತಮ್ಮ ಗುರುಗಳ ಆಜ್ಞೆಯಂತೆ 'ನೈಷ್ಕರ್ಮ್ಯಸಿದ್ಧಿ' ಎಂಬ ಅತ್ಯಂತ ಉತ್ಕೃಷ್ಟವಾದ ಗ್ರಂಥವನ್ನು ರಚಿಸಿದರು. ಅದಲ್ಲದೆ ಶಂಕರಾಚಾರ್ಯರು ಬರೆದಿರುವ ತೈತ್ತಿರೀಯ ಹಾಗೂ ಬೃಹದಾರಣ್ಯಕ ಉಪನಿಷತ್ತುಗಳ ಭಾಷ್ಯಗಳ ಮೇಲೆ ಉತ್ತಮವಾದ ವಾರ್ತಿಕೆಗಳನ್ನು ರಚಿಸಿ 'ವಾರ್ತಿಕಕಾರ'ರೆಂದು ಹೆಸರನ್ನು ಪಡೆದರು.

ತಮ್ಮ ದಿಗ್ವಿಜಯ ಯಾತ್ರೆಯ ಸಮಯದಲ್ಲಿ ಶಂಕರರು ಶಿಷ್ಯರ ಸಮೇತ ಪಶ್ಚಿಮ ಘಟ್ಟಗಳ ಪರಿಸರದಲ್ಲಿರುವ ಒಂದು ಅತ್ಯಂತ ಪ್ರಶಾಂತವಾದ ಅರಣ್ಯಪ್ರದೇಶಕ್ಕೆ ಬಂದರು. ಆ ಪ್ರದೇಶ ಅತ್ಯಂತ ರಮಣೀಯವೂ ಪ್ರಶಾಂತವೂ ಆಗಿತ್ತು. ಆಚಾರ್ಯರು ಹಿಂದೆ ತಾವು ಗುರುವನ್ನು ಅರಸುತ್ತಾ ಆ ಸ್ಥಳಕ್ಕೆ ಬಂದಿದ್ದಾಗ ತಾವು ಕಂಡಿದ್ದ ಒಂದು ವಿಚಿತ್ರ ದೃಶ್ಯದ ಬಗ್ಗೆ ಹೀಗೆ ಹೇಳಿದರು: "ಆ ದಿವಸ ಮಧ್ಯಾಹ್ನ ಬಹಳ ಬಿಸಿಲು. ಒಂದು ಮರದ ಕೆಳಗೆ ಕುಳಿತು ನೋಡುತ್ತಿದ್ದೆ. ಆಗ ಬಿಸಿಲಿನ ತಾಪದಿಂದ ಬಸವಳಿದು

ಹೊರಳಾಡುತ್ತಿದ್ದ ಗರ್ಭಿಣಿ ಕಪ್ಪೆಯೊಂದಕ್ಕೆ ಕೃಷ್ಣಸರ್ಪವೊಂದು ತನ್ನ ಹೆಡೆಯನ್ನು ಬಿಚ್ಚಿ, ಅದರ ಮೇಲೆ ಕೊಡೆ ಹಿಡಿದಂತೆ ನೆರಳನ್ನು ಒದಗಿಸಿತು. ಇದನ್ನು ನೋಡಿ ಎರಡು ಆಜೀವ ವೈರಿಗಳು ಪ್ರೀತಿಯಿಂದಿರಬೇಕಾದರೆ ಇದು ಯಾರದೋ ತಪೋಭೂಮಿಯಾಗಿರಬೇಕು, ಇಲ್ಲಿ ಎಲ್ಲಿಯಾದರೂ ಋಷಿಗಳ ಆಶ್ರಮ ವಿರಬಹುದು ಎಂದು ಭಾವಿಸಿ, ಹುಡುಕುತ್ತಿದ್ದಾಗ ಒಂದು ಸಣ್ಣ ಗಿರಿಶಿಖರ ಕಾಣಿಸಿತು. ಆ ಮೆಟ್ಟಲುಗಳನ್ನು ಹತ್ತಿ ಹೋದಾಗ ಅಲ್ಲೊಬ್ಬ ತಪಸ್ವಿಯನ್ನು ಕಂಡೆ. ಅವರು ಆ ಸ್ಥಳದ ಮಹಾತ್ಮೆಯನ್ನು ಹೀಗೆ ವಿವರಿಸಿದರು: 'ಇದು ವಿಭಾಂಡಕ ಮುನಿಗಳ ಆಶ್ರಮ ಪ್ರದೇಶ. ಅವರು ಋಷ್ಯಶೃಂಗರನ್ನು ಪಡೆದು ಇಲ್ಲಿರುವ ಮಲ್ಲಿಕಾರ್ಜುನ ಲಿಂಗದಲ್ಲಿ ಐಕ್ಯರಾದರು. ಋಷ್ಯಶೃಂಗರು ತಪಸ್ಸು ಮಾಡಿದ ತಪೋವನ ಪ್ರದೇಶ ಇದು. ಆದುದರಿಂದಲೇ ವೈರವಿಲ್ಲದೆ ಪ್ರಾಣಿಗಳು ಒಟ್ಟಾಗಿ ಪ್ರೀತಿಯಿಂದ ಜೀವಿಸುತ್ತವೆ. ಇದನ್ನು ಋಷ್ಯಶೃಂಗಗಿರಿ ಎಂದು ಕರೆಯುತ್ತಾರೆ.' " ಆ ಪ್ರದೇಶವು ಪ್ರಶಸ್ತವಾಗಿಯೂ, ಪ್ರಶಾಂತವಾಗಿಯೂ ಇದ್ದುದರಿಂದ ಅಲ್ಲಿ ಒಂದು ಆಮ್ನಾಯ ಪೀಠವನ್ನು ಆರಂಭಿಸಿದರು. ಶ್ರೀಶಾರದಾದೇವಿಯನ್ನು ವಿಧ್ಯುಕ್ತವಾಗಿ ಆವಾಹಿಸಿ, ಆರಾಧಿಸಿ ಒಂದು ಯಂತ್ರರೂಪದಲ್ಲಿ ಆಕೆಯನ್ನು ಅಲ್ಲಿ ನೆಲೆಗೊಳಿಸಿದರು. ಅಲ್ಲಿಗೆ ಶ್ರೀಸುರೇಶ್ವರಾಚಾರ್ಯರನ್ನು ಪೀಠಾಧ್ಯಕ್ಷರಾಗಿ ನಿಯೋಜಿಸಿದರು. ಇದು ಶೃಂಗೇರಿ ಮಠದ ಐತಿಹ್ಯ.

## ತೋಟಕಾಚಾರ್ಯರು

ಶೃಂಗೇರಿಯಲ್ಲಿರುವಾಗ ಆಚಾರ್ಯರಿಗೆ ಮತ್ತೊಬ್ಬ ಶಿಷ್ಯನು ದೊರೆತನು. ಇವನು ಕರ್ನಾಟಕಕ್ಕೇ ಸೇರಿದ ಆನಂದಗಿರಿ. ಇವನು ವೇದಶಾಸ್ತ್ರಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದನು. ವಿದ್ವಾಂಸನೂ ಮೇಧಾವಿಯೂ ಆಗಿದ್ದನು. ಗುರುಗಳಲ್ಲಿ ಅತೀವ ಭಕ್ತಿ. ಮನೋವಾಕ್ಕಾಯವಾಗಿ ಸದಾ ಗುರುವಿನ ಸೇವೆಯಲ್ಲಿ ನಿರತನಾಗಿದ್ದ. ಅದೇ ಇವನಿಗೆ ಜ್ಞಾನದಾಯಕವೂ ಮುಕ್ತಿದಾಯಕವೂ ಆಗಿತ್ತು. ಇದರಿಂದ ಇವನು ಗುರುಗಳ ಪೂರ್ಣವಿಶ್ವಾಸವನ್ನೂ ಸಹಜ ಪ್ರೀತಿಯನ್ನೂ ಗಳಿಸಿದ್ದನು. ಆಚಾರ್ಯರು ಭಾಷ್ಯಗಳ ಪ್ರವಚನ ಮಾಡುವಾಗ ಇವನು ಇತರ ಶ್ರೋತೃಗಳಿಂದ ಬೇರೆಯಾಗಿ ಕುಳಿತು ಏಕಾಗ್ರಚಿತ್ತದಿಂದ ಕೇಳುತ್ತಿದ್ದನು. ಇವನ ಬುದ್ಧಿವಂತಿಕೆಯನ್ನು ಅರಿಯದ ಇತರ ಶಿಷ್ಯರು ಇವನನ್ನು ಆಲಸಿ, ಜಡ, ಮೂಢನೆಂದು ತಿಳಿದಿದ್ದರು.

ಒಂದು ದಿನ ಆಚಾರ್ಯರು ಪ್ರವಚನ ಮಾಡಲು ಬಂದಾಗ ಗಿರಿ ಅಲ್ಲಿರಲಿಲ್ಲ. ಅವನು ಗುರುಗಳ ಬಟ್ಟೆಯನ್ನು ತುಂಗಾನದಿಯ ತೀರದಲ್ಲಿ ಒಗೆಯುವುದರಲ್ಲಿ ಮಗ್ನನಾಗಿದ್ದ. ಉಳಿದ ಶಿಷ್ಯರೂ ಶ್ರೋತೃಗಳೂ ಬಂದು ಸೇರಿದ್ದರು. ಆಚಾರ್ಯರು ಆ ಕಡೆ, ಈ ಕಡೆ ನೋಡುತ್ತಾ ಪ್ರವಚನವನ್ನು ಪ್ರಾರಂಭಿಸಲಿಲ್ಲ. ಪದ್ಮಪಾದರು ಆಚಾರ್ಯರನ್ನು ಕುರಿತು, "ಗುರುಗಳೇ, ಪಾಠ ಆರಂಭಿಸಬಹುದಲ್ಲ" ಎಂದರು. ಆಗ ಆಚಾರ್ಯರು ಅವರನ್ನು ಸ್ವಲ್ಪ ತಡೆಯುವಂತೆ ಕೈಸನ್ನೆ ಮಾಡಿ, ಗಿರಿ ಇರುವ ಕಡೆ ಕೈತೋರಿಸಿ ಅವನೂ ಬರಲಿ ಎಂದರು. ಆಗ ಅವರು ಆಚಾರ್ಯರಿಗೆ ಹೀಗೆ ಹೇಳಿದರು : "ಗಿರಿ ಒಬ್ಬ ಮೂಢ. ಮಂದಮತಿಯಾದ ಅವನಿಗಾಗಿ ಕಾಯುವುದರಿಂದ ಸುಮ್ಮನೆ ಸಮಯ ವ್ಯರ್ಥ. ಅವನಿಗೆ ಏನು ಅರ್ಥವಾಗುತ್ತದೆ!" ಈ ತಿರಸ್ಕಾರದ ಮಾತುಗಳನ್ನು ಕೇಳಿ ಆಚಾರ್ಯರಿಗೆ ಬೇಸರವಾಯಿತು. ಪಾಂಡಿತ್ಯ ಎಷ್ಟಿದ್ದರೇನು? ನಿರ್ಮಲ ಅಂತಃಕರಣವಿಲ್ಲದಿದ್ದರೆ ಎಲ್ಲವೂ ವ್ಯರ್ಥ! ಆಚಾರ್ಯರು ಆ ಶಿಷ್ಯರ ದುರಭಿಮಾನವನ್ನು ಹೋಗಲಾಡಿಸಲು, ಗುರುಭಕ್ತನಾಗಿದ್ದ ಗಿರಿಯಲ್ಲಿ ಸುಪ್ತವಾಗಿದ್ದ ಅಂತಃಶಕ್ತಿಯನ್ನು ತಮ್ಮ ಆತ್ಮಶಕ್ತಿಯ ಪ್ರಭಾವದಿಂದ ಜಾಗ್ರತಗೊಳಿಸಿದರು. ಗಿರಿಯ ಹೃದಯದಲ್ಲಿ ಜ್ಯೋತಿ ಸಂಚರಿಸಿದಂತಾಯಿತು. ಕವಿತಾಶಕ್ತಿಯು ಸ್ಫುರಿಸಿತು. ಗುರುಗಳ ಸ್ತುತಿರೂಪವಾದ ಆಶುಕವಿತೆ ತೋಟಕವೃತ್ತದಲ್ಲಿ ಹೊರಬರಲಾರಂಭಿಸಿತು. ಆ ಶ್ಲೋಕಗಳನ್ನು ಹಾಡುತ್ತಾ ಅವನು ಗುರುಗಳ ಮುಂದೆ ಬಂದು ನಮಸ್ಕರಿಸಿದನು. ತಮ್ಮ ಕೃತ್ಯಕ್ಕಾಗಿ ಇತರ ಶಿಷ್ಯರು ಪಶ್ಚಾತ್ತಾಪ ಪಟ್ಟರು. ಆನಂದಗಿರಿಯು ಹೇಳಿದ ಸ್ತೋತ್ರದ ಪ್ರತಿಯೊಂದು ಶ್ಲೋಕವು "**ಭವ ಶಂಕರ ದೇಶಿಕ ಮೇ ಶರಣಮ್**" ಎಂಬ ನಾಲ್ಕನೇ ಚರಣದಲ್ಲಿ ಕೊನೆಗೊಳ್ಳುತ್ತದೆ. ಇದನ್ನು 'ತೋಟಕಾಷ್ಟಕ' ಎಂದು ಕರೆಯುತ್ತಾರೆ.

ಮರುದಿನ ಆಚಾರ್ಯರು ಆನಂದಗಿರಿಗೆ ಸಂನ್ಯಾಸ ದೀಕ್ಷೆ ಕೊಟ್ಟು ತಮ್ಮ ಮೂರನೆಯ ಪ್ರಧಾನ ಶಿಷ್ಯನನ್ನಾಗಿ ಸ್ವೀಕರಿಸಿದರು. ಅವರು ಹಾಡಿದ್ದ ಗುರುಸ್ತುತಿಯು ತೋಟಕವೃತ್ತದಲ್ಲಿದ್ದುದರಿಂದ ಅವರಿಗೆ 'ಶ್ರೀತೋಟಕಾಚಾರ್ಯ'ರೆಂದು ಹೆಸರನ್ನು ಕೊಟ್ಟರು. ಸಂನ್ಯಾಸವನ್ನು ಸ್ವೀಕರಿಸಿದನಂತರವೂ ತೋಟಕಾಚಾರ್ಯರು ಗುರುಸೇವೆಯನ್ನು ಬಿಡಲಿಲ್ಲ. ಆಚಾರ್ಯರು ಹಿಮಾಲಯದ ಬದರೀನಾಥಕ್ಕೆ ಬಂದಾಗ ಅಲ್ಲಿ ಒಂದು ಆಮ್ನಾಯಪೀಠವನ್ನು ಸ್ಥಾಪಿಸಿ ತೋಟಕಾಚಾರ್ಯರನ್ನು ಪೀಠಾಧೀಶರನ್ನಾಗಿ ಮಾಡಿದರು. ಇದಕ್ಕೆ ಜ್ಯೋತಿರ್ಮಠವೆಂದು ಹೆಸರಾಯಿತು.

## ಹಸ್ತಾಮಲಕಾಚಾರ್ಯರು

ಆಚಾರ್ಯರು ಅಹೋಬಲ, ತಿರುಪತಿ, ಗೋಕರ್ಣ, ಕೊಲ್ಲೂರು ಮುಂತಾದ ಸ್ಥಳಗಳಿಗೆ ಭೇಟಿಕೊಟ್ಟು ಕೊನೆಗೆ ಕೊಲ್ಲೂರಿನ ಸಮೀಪದಲ್ಲಿರುವ ಶ್ರೀವಲೀಗೆ ಬಂದರು. ಅಲ್ಲಿ ಪ್ರಭಾಕರ ಭಟ್ಟನೆಂಬ ಒಬ್ಬ ಬ್ರಾಹ್ಮಣ ಪಂಡಿತನಿದ್ದನು. ಒಂದು ದಿನ ಅವನು ಆಚಾರ್ಯರನ್ನೂ ಅವರ ಶಿಷ್ಯರನ್ನೂ ಭಿಕ್ಷೆಗೆ ಆಹ್ವಾನಿಸಿದನು. ಅವನಿಗೊಬ್ಬ ಪೃಥ್ವೀಧರನೆಂಬ ಮಗ. ಅವನನ್ನು ಕರೆದು ಆಚಾರ್ಯರಿಗೆ ನಮಸ್ಕರಿಸುವಂತೆ ಹೇಳಿ ತನ್ನ ಮಗನ ಶೋಚನೀಯ ಪರಿಸ್ಥಿತಿಯನ್ನು ಹೀಗೆ ವಿವರಿಸಿದನು : "ಗುರುಗಳೇ, ನನ್ನ ಮಗನಿಗೆ ಈಗ ೧೩ ವರ್ಷ ವಯಸ್ಸು. ಎಂಟನೆಯ ವಯಸ್ಸಿನಲ್ಲೇ ಉಪನಯನ ಮಾಡಿದೆ. ಆದರೆ ಇವನು ಒಂದು ದಿನವಾದರೂ ಬಾಯಿಬಿಟ್ಟು ಮಾತನಾಡಿಲ್ಲ. ಮಾತಿಲ್ಲ, ಕತೆಯಿಲ್ಲ; ನಗುವಿಲ್ಲ, ಅಳುವಿಲ್ಲ. ಸದಾ ಏಕಾಂತದಲ್ಲಿ ಕುಳಿತು ಮೂಕನಂತೆ ಮಂಕಾಗಿ ಏನನ್ನೋ ಯೋಚಿಸುತ್ತಿರುವಂತೆ ಕಾಣುತ್ತಾನೆ. ಯಾವ ಕೆಲಸವನ್ನೂ ಮಾಡುವುದಿಲ್ಲ. ಎಷ್ಟು ಕಾಲ ಆಹಾರವನ್ನು

ಕೊಡದಿದ್ದರೂ ಕೇಳುವುದಿಲ್ಲ. ಆಹಾರ ಕೊಟ್ಟರೆ ಮಿತಿ ಇಲ್ಲದೆ ತಿನ್ನುತ್ತಾನೆ. ಎಷ್ಟು ಬೈದರೂ ಕೋಪಗೊಳ್ಳುವುದಿಲ್ಲ. ತಾವೇ ಇವನನ್ನು ಅನುಗ್ರಹಿಸಿ ಸರಿಮಾಡಬೇಕು." ಆಚಾರ್ಯರು ಹುಡುಗನತ್ತ ಒಮ್ಮೆ ನೋಡಿ, ಅವನನ್ನು ಕೈಹಿಡಿದು ಮೇಲಕ್ಕೆ ಎಬ್ಬಿಸಿದರು. ಹುಡುಗನ ಮೈಯಲ್ಲಿ ಚೈತನ್ಯದ ಮಿಂಚು ಹರಿಯಿತು. ಮುಖದಲ್ಲಿ ಕಾಂತಿ ಕಂಗೊಳಿಸಿತು. ಶಂಕರರು ಅವನನ್ನು ನೋಡಿದ ಕೂಡಲೇ ಅವನೊಬ್ಬ ಮಹಾತಪಸ್ವಿಯೂ ಬ್ರಹ್ಮಜ್ಞಾನಿಯೂ ಆದ ಯೋಗಿ ಎಂದು ತಿಳಿದರು.

ಶಂಕರರು : "ಮಗೂ, ನೀನು ಯಾರು? ಎಲ್ಲಿಂದ ಬಂದೆ, ನಿನ್ನ ಜನ್ಮಸ್ಥಳ ಯಾವುದು? ನಿನ್ನ ಹೆಸರೇನು?" ಬಾಲಕನ ಮುಖ ಅರಳಿತು. ಮುಗುಳುನಗೆ ಮಿನುಗಿತು. ಅವರ ಪ್ರಶ್ನೆಗಳಿಗೆ ಉತ್ತರವಾಗಿ, ಅರ್ಥಗರ್ಭಿತವಾದ ವೇದಾಂತದಿಂದ ತುಂಬಿರುವ ಶ್ಲೋಕಗಳಿಂದ, ತಾನು ಆತ್ಮಸ್ವರೂಪನೆಂದು ತಿಳಿಸಿದನು. ಆಚಾರ್ಯರೂ ಅಲ್ಲಿ ನೆರೆದಿದ್ದ ಎಲ್ಲರೂ ಆಶ್ಚರ್ಯಗೊಂಡರು. ಇದನ್ನು ಕೇಳಿದ ಅವನ ತಂದೆತಾಯಿಗಳೂ ವಿಸ್ಮಿತರಾದರು. ಇವನನ್ನು ಜಡನೆಂದು ಭಾವಿಸಿದ್ದ ಅವರು ಇವನು ಬ್ರಹ್ಮಜ್ಞಾನಿ ಎಂದು ಗುರುತಿಸಿದರು. ಆಗ ಆಚಾರ್ಯರು ಪ್ರಭಾಕರ ಭಟ್ಟನಿಗೆ ಹೇಳಿದರು : "ನೋಡಿ, ನಿಮ್ಮ ಪುತ್ರ ಮೂರ್ಖನಲ್ಲ. ಇವನು ಹಿಂದಿನ ಜನ್ಮದಲ್ಲಿ ಒಬ್ಬ ಮಹಾಯೋಗಿಯಾಗಿದ್ದನು. ಇವನಿಗೆ ಸಂಸಾರದಲ್ಲಿ ಆಸಕ್ತಿ ಇಲ್ಲ. ಇವನನ್ನು ನಮಗೆ ಒಪ್ಪಿಸಿಬಿಡಿ. ನಮ್ಮ ಶಿಷ್ಯನಾಗಲಿ. ಭಗವಂತನ ಕೃಪೆಯಿಂದ ನಿಮಗೆ ಮತ್ತೊಬ್ಬ ಮಗ ಹುಟ್ಟುತ್ತಾನೆ."

ಶಂಕರರ ಇಚ್ಛೆಯಂತೆ ಅವನ ತಂದೆತಾಯಿಗಳು ಅವನನ್ನು ಶಂಕರರಿಗೆ ಸಂತೋಷದಿಂದ ಒಪ್ಪಿಸಿದರು. ಶಂಕರರು ಅವನಿಗೆ ಸಂನ್ಯಾಸ ದೀಕ್ಷೆ ಕೊಟ್ಟು ತತ್ತ್ವಮಸಿ ಮೊದಲಾದ ಮಹಾವಾಕ್ಯಗಳನ್ನು ಉಪದೇಶಿಸಿದರು. ವೇದಾಂತದ ತಿರುಳನ್ನೆಲ್ಲಾ ಅಂಗೈಯೊಳಗಿನ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ತಿಳಿದಿದ್ದವನಾದುದರಿಂದ ಇವನಿಗೆ 'ಹಸ್ತಾಮಲಕಾಚಾರ್ಯ' ಎಂದು ಹೆಸರಿಟ್ಟು ಆಶೀರ್ವದಿಸಿದರು. ಹೀಗೇ ಸಂಚರಿಸುತ್ತಾ ಆಚಾರ್ಯರು ತಮ್ಮ ಶಿಷ್ಯರೊಡನೆ ಜಗನ್ನಾಥನ ದರ್ಶನಕ್ಕೆ ಪುರಿಗೆ ಬಂದರು. ಇದು ಒರಿಸ್ಸಾ ರಾಜ್ಯದ ಸಮುದ್ರದಡದಲ್ಲಿದೆ. ಇಲ್ಲಿ ಒಂದು ಮಠವನ್ನು ಸ್ಥಾಪಿಸಿ ತಮ್ಮ ಪ್ರಧಾನ ಶಿಷ್ಯರಲ್ಲಿ ಒಬ್ಬರಾದ ಹಸ್ತಾಮಲಕಾಚಾರ್ಯರನ್ನು ಆ ಪೀಠದ ಅಧಿಪತಿಗಳನ್ನಾಗಿ ನೇಮಿಸಿದರು. ಇದು ಋಕ್‌ಶಾಖೆಯ ಪೂರ್ವಾಮ್ನಾಯ ಪೀಠವಾಯಿತು. ಇದನ್ನು ಗೋವರ್ಧನ ಪೀಠವೆಂದು ಕರೆದರು.

ಶಂಕರರ ಈ ನಾಲ್ವರು ಶಿಷ್ಯರು ವೇದಾಂತ ಧರ್ಮಪ್ರಸಾರವನ್ನು ತಮ್ಮ ವಾದಗಳಿಂದಲೂ ಶಾಸ್ತ್ರರಚನೆಯಿಂದಲೂ ಅದ್ಭುತವಾಗಿ ಮಾಡಿದರು. ಸುರೇಶ್ವರಾಚಾರ್ಯರು ಅತ್ಯುತ್ಕೃಷ್ಟ ಪ್ರಜ್ಞಾಶಾಲಿಗಳು, ತೋಟಕಾಚಾರ್ಯರು ಅದ್ವೈತದ ಬಗ್ಗೆ ಆಳವಾದ ಭಕ್ತಿಯುಳ್ಳವರು, ಪದ್ಮಪಾದಾಚಾರ್ಯರು ಸೂಕ್ಷ್ಮ ಪರಿಜ್ಞಾನದ ಜೊತೆಗೆ ಗುರುಭಕ್ತಿ ಪರಾಯಣರು ಹಾಗೂ ಹಸ್ತಾಮಲಕರು ಆತ್ಮಪರೀಕ್ಷಾಗುಣದಿಂದ ವೈಶಿಷ್ಟ್ಯಗಳಿಸಿದ್ದವರು. ವಿದ್ಯಾರಣ್ಯರ 'ಶಂಕರದಿಗ್ವಿಜಯ' ಗ್ರಂಥದಲ್ಲಿ ಈ ನಾಲ್ವರು ಪ್ರಧಾನ ಶಿಷ್ಯರ ಬಗ್ಗೆ ಹಲವಾರು ಉಲ್ಲೇಖಗಳಿವೆ.

◆

### ಶ್ರೀಶಂಕರಾಚಾರ್ಯರು ಸ್ಥಾಪಿಸಿದ ೪ ಮಠಗಳ ವಿವರ

| ಅಧ್ಯಕ್ಷರು | ಸ್ಥಳ | ಶಕ್ತಿ | ವೇದ | ಮಹಾವಾಕ್ಯ | ತೀರ್ಥ | ಬಿರುದು | ಮಠ | ದೇವತ |
|---|---|---|---|---|---|---|---|---|
| ಹಸ್ತಾಮಲಕರು | ಪುರಿ (ಪೂರ್ವ) | ವಿಮಲಾ | ಋಗ್ವೇದ | ಪ್ರಜ್ಞಾನಂ ಬ್ರಹ್ಮ | ಮಹೋದಧಿ (ಸಮುದ್ರ) | ಅರಣ್ಯ, ವನ | ಗೋವರ್ಧನ | ಜಗನ್ನಾಥ |
| ಸುರೇಶ್ವರಾಚಾರ್ಯರು | ಶೃಂಗೇರಿ (ದಕ್ಷಿಣ) | ಶಾರದಾ | ಯಜುರ್ವೇದ | ಅಹಂ ಬ್ರಹ್ಮಾಸ್ಮಿ | ತುಂಗಭದ್ರ | ಸರಸ್ವತಿ, ಪುರಿ, ತೀರ್ಥ, ಗಿರಿ, ಆಶ್ರಮ | ಶಾರದಾ ಮಠ | ಆದಿವರಾಹ |
| ಪದ್ಮಪಾದಾಚಾರ್ಯರು | ದ್ವಾರಕಾ (ಪಶ್ಚಿಮ) | ಭದ್ರಕಾಳಿ | ಸಾಮವೇದ | ತತ್ತ್ವಮಸಿ | ಗೋಮತೀ ನದಿ | ತೀರ್ಥ ಆಶ್ರಮ | ಕಾಲಿಕಾ ಮಠ | ಸಿದ್ಧೇಶ್ವರ |
| ತೋಟಕಾಚಾರ್ಯರು | ಬದರೀನಾಥ (ಉತ್ತರ) | ಪೂರ್ಣಗಿರಿ | ಅಥರ್ವ ವೇದ | ಅಯಮಾತ್ಮಾ ಬ್ರಹ್ಮ | ಅಲಕನಂದಾ | ಗಿರಿ, ಪರ್ವತ ಸಾಗರ | ಜ್ಯೋತಿರ್ ಮಠ | ನಾರಾಯಣ |